<u>**ಸಾಕ್ಷಿಗೆ ದಿನಾಂಕ *13 -02-2026* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲು ಃ ವಾದಿಯರ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**</u>

ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ, ಓದಲು ಬರೆಯಲು ಬರುವುದಿಲ್ಲ. ನನಗೆ ಸಾಕ್ಷಿ ಹೇಳಲು 2 ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ. ಈ ದಾವೆಯನ್ನು ಯಾರು ಯಾರ ಮೇಲೆ ಏತಕ್ಕಾಗಿ ಹಾಕಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಕೊಟ್ಟಿರುತ್ತಾರೆ ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. 2 ನೇ ಪ್ರತಿವಾದಿಯು ಹೇಳಿದ ಹಾಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. 2 ನೇ ಪ್ರತಿವಾದಿಯು ಮಾಹಿತಿಯನ್ನು ನೀಡಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ನಾನೇ ಹೇಳಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ಸಂಗಪ್ಪ @ ಸಂಗನಗೌಡ ರವರ ತಂದೆಯ ಹೆಸರು ಗೊತ್ತಿರುವುದಿಲ್ಲ. ಸಂಗಪ್ಪ ಮತ್ತು ಅವರ ತಂದೆಯ ಮನೆತನದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ.

ನಾನು ಸಂಗಪ್ಪ ರವರ ತಂದೆಯವರನ್ನು ನೋಡಿರುವುದಿಲ್ಲ. ಸಂಗಪ್ಪ ರವರ ತಂದೆಯ ಊರು ಅಮರಾವತಿ ಗ್ರಾಮ ಎಂದರೆ ಸರಿ. ಸಂಗಪ್ಪ ರವರ ತಂದೆ ಜೀವಂತ ಇದ್ದಾಗ ದೇಸಾಯಿ ರವರ ಹೊಲವನ್ನು ಸಾಗುವಳಿ ಮಾಡುತ್ತಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. ಸಂಗಪ್ಪ ರವರ ತಂದೆ ಚನ್ನಪ್ಪ ರವರಿಗೆ ಸರ್ವೆ ನಂ. 188 ಕ್ಷೇತ್ರ 16 ಎಕರೆ 2 ಗುಂಟೆ ಇದನ್ನು ಸರಕಾರದವರು ಮಂಜೂರು ಮಾಡಿದ್ದರು ಎಂದರೆ ಸರಿ. ಸರಕಾರದವರು ಮಂಜೂರು ಮಾಡಿದ ನಂತರ ಸಂಗಪ್ಪ ರವರ ತಂದೆಯ ಹೆಸರು ದಾಖಲೆಗಳಲ್ಲಿ ಮಾಲೀಕರು ಮತ್ತು ಕಬ್ಜಾದಾರರ ಕಾಲಂ ನಲ್ಲಿ ನಮೂದು ಆಗಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. ಚನ್ನಪ್ಪ ತೀರಿಕೊಂಡ ನಂತರ ಅವರ ಮಕ್ಕಳಾದ ಸಂಗಪ್ಪ ಮತ್ತು ಬಸಪ್ಪ ರವರು ಅವರು ಬಿಟ್ಟು ಹೋದ ಆಸ್ತಿಗಳ ಸಾಗುವಳಿ ಮಾಡುತ್ತಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. ಬೈಲಪ್ಪ ತಂ.ಮರಿಬಸಪ್ಪ ಗೌಡರ ಮತ್ತು ಚನ್ನಪ್ಪ ತಂ. ಬಸಪ್ಪ ಗೌಡರ ಇವರು ಖಾಸ ಅಣ್ಣ ತಮ್ಮಂದಿರು ಅಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬೈಲಪ್ಪ ಮತ್ತು ಚನ್ನಪ್ಪ ರವರು ಪಾಲುವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ಹೇಳಿ ಬರೆಸಿರುವುದಿಲ್ಲ. ಆ ರೀತಿ ಪಾಲುವಾಟ್ನಿ ಪತ್ರವು ನನ್ನ ಸಮಕ್ಷಮ ಆಗಿರುವುದಿಲ್ಲ ಮತ್ತು ನಾನು ಅದನ್ನು ನೋಡಿರುವುದಿಲ್ಲ. ಆ ಪಾಲುವಾಟ್ನಿ ಪ್ರಕಾರ ಡ

ಮಂಜೂರು ಆಗಿದೆ ಎಂದು ನಾನು ಮಾಹಿತಿ ನೀಡಿರುವುದಿಲ್ಲ. ಚನ್ನಪ್ಪ ರವರ ಮಗ ಸಂಗಪ್ಪ ಇಂದು ಮಾನ್ಯ ನ್ಯಾಯಾಲಯದಲ್ಲಿ ಇದ್ದು, ಅವರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಮದ್ಯ 2015 ರಲ್ಲಿ ನ್ಯಾಯ ಆದ ವಿಷಯ ಗೊತ್ತಿರುತ್ತದೆ. ಬೈಲಪ್ಪ ಮತ್ತು ಚನ್ನಪ್ಪ ರವರಿಗೆ ಪಾಲು ವಾಟ್ನಿ ಆಗಿ ತಮ್ಮ ಹೆಸರು ಹಚ್ಚಿಕೊಂಡಿದ್ದು, ಅದನ್ನು ಸಂಗಪ್ಪ ರವರು ಕೇಳಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಸಂಗಪ್ಪ ರವರ ಕಬ್ಜಾ ವಹಿವಾಟಿಗೆ 2015 ರಲ್ಲಿ ತೊಂದರೆ ಮಾಡಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಊರಿನಲ್ಲಿ ರಾಜಕೀಯವಾಗಿ ಪ್ರಭಾವಿ ವ್ಯಕ್ತಿಗಳಾಗಿದ್ದು, ಊರಿನಲ್ಲಿ ಹಿರಿತನ ಮಾಡುತ್ತಾರೆ ಎಂದರೆ ಸರಿ. ಸಂಗಪ್ಪ ರವರು ಮುಗ್ದ ಸ್ವಭಾವದವರು ಆಗಿದ್ದು, ಪ್ರತಿವಾದಿಯರು ಒತ್ತಾಯಪೂರ್ವಕವಾಗಿ ದಾವಾ ಆಸ್ತಿಗೆ ಬಂದಿದ್ದ ವಿಷಯ ನನಗೆ ಗೊತ್ತಿರುವುದಿಲ್ಲ. 2019 ರಿಂದ ಪ್ರತಿವಾದಿಯರು ಸದರಿ ದಾವಾ ಆಸ್ತಿಯಲ್ಲಿ ಬೇಕಾಯ್ದೇಶೀರ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಮತ್ತು ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರದೇ ಇದ್ದರೂ 2 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.